ಮತ್ತೊಂದು ಘಟನೆ ನಡೆದಾಗ ಮತ್ತೊಂದು ಪತ್ರ.

ಕರ್ನಾಟಕದಲ್ಲಿ ಕೂಡ ಆ್ಯಸಿಡ್ ದಾಳಿಗಳು ಆಗಾಗ ವರದಿಯಾಗುತ್ತಲೇ ಇವೆ. ಬೆಂಗಳೂರಿನಲ್ಲಿ ಬಿಎಂಟಿಸಿ ಬಸ್ ನಿರ್ವಾಹಕಿಯೊಬ್ಬರ ಮೇಲೆ ಕರ್ತವ್ಯದಲ್ಲಿದ್ದಾಗಲೇ ಆ್ಯಸಿಡ್ ದಾಳಿ ನಡೆದ ಘಟನೆ ಇತ್ತೀಚೆಗಷ್ಟೇ ವರದಿಯಾಗಿದೆ. ದಾವಣಗೆರೆ, ಚಿಕ್ಕಮಗಳೂರು, ಚಿತ್ರದುರ್ಗ, ಮೈಸೂರು, ಹಾಸನ, ಬಳ್ಳಾರಿ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ದಕ್ಷಿಣ ಕನ್ನಡ ಜಿಲ್ಲೆಗಳಿಂದಲೂ ದಾಳಿಗಳ ಪ್ರಕರಣಗಳು ವರದಿಯಾಗಿವೆ. ದಾಖಲಾಗದ ಪ್ರಕರಣಗಳು ಎಲ್ಲೆಲ್ಲಿವೆಯೋ?

## ಗಟ್ಟಿಗಿತ್ತಿಯರ ಮಾದರಿ

ಲಕ್ಷ್ಮಿ ಆ್ಯಸಿಡ್ ದಾಳಿಗೆ ತುತ್ತಾಗಿದ್ದು ಹದಿನಾರರ ವಯಸ್ಸಿನಲ್ಲಿ, 2005ರಲ್ಲಿ. ತನ್ನನ್ನು ಮದುವೆಯಾಗುವಂತೆ ದುಂಬಾಲು ಬಿದ್ದಿದ್ದ ಹುಡುಗನೊಬ್ಬ ದುಷ್ಕೃತ್ಯವೆಸಗಿದ್ದ. ಮೆಚ್ಚಿದ ಹುಡುಗಿಯ ಮುಖಕ್ಕೇ ಆ್ಯಸಿಡ್ ಸುರಿದಿದ್ದ. ದೆಹಲಿಯ ಖಾನ್ ಮಾರ್ಕೆಟ್‌ಗೆ ಸಮೀಪದಲ್ಲಿ, ಜನನಿಬಿಡ ಪ್ರದೇಶದಲ್ಲಿಯೇ ದಾಳಿ ನಡೆದಿತ್ತು. ಅದಾಗಿ ಕೆಲವು ತಿಂಗಳ ನಂತರ ಕನ್ನಡಿಯಲ್ಲಿ ತಮ್ಮ ಮುಖ ನೋಡಿಕೊಂಡಾಗ ಲಕ್ಷ್ಮಿ ಕುಸಿದುಹೋಗಿದ್ದರು. ಆದರೆ, ಆಕೆ ಎಂಥ ಗಟ್ಟಿಗಿತ್ತಿಯೆಂದರೆ, ಮುರಿದ ಬದುಕನ್ನು ಮತ್ತೆ ಧೈರ್ಯವಾಗಿ ಕಟ್ಟಿಕೊಳ್ಳಲು ಪ್ರಯತ್ನಿಸಿ ಅದರಲ್ಲಿ ಯಶಸ್ವಿಯೂ ಆದರು. ಆ್ಯಸಿಡ್ ದಾಳಿಗೆ ಒಳಗಾದ ಹೆಣ್ಣುಮಕ್ಕಳ ನೋವಿಗೆ ಮಿಡಿಯುವ ಅಲೋಕ್ ದೀಕ್ಷಿತ್ ಎನ್ನುವ ಸಾಮಾಜಿಕ ಕಾರ್ಯಕರ್ತನೊಂದಿಗೆ ಅವರ ಮದುವೆಯೂ ಆಯಿತು. ಈಗವರಿಗೆ ಮುದ್ದಾದ ಮಗಳೂ ಇದ್ದಾಳೆ. ಆಭರಣ ಕಂಪನಿಯೊಂದರ ರಾಯಭಾರಿಯಾಗಿಯೂ ಲಕ್ಷ್ಮಿ ಕಾರ್ಯನಿರ್ವಹಿಸಿದ್ದಾರೆ. ಇಂಥ ಅದೃಷ್ಟ ಎಷ್ಟು ಮಂದಿಗೆ ದೊರಕೀತು? ‘ನನ್ನ ಕನಸುಗಳನ್ನು

**ಎಲ್ಲಾದರೂ ಕಾನೂನು ಬಾಹಿರವಾಗಿ ಆ್ಯಸಿಡ್ ಮಾರಾಟ, ಖರೀದಿ ಕಂಡುಬಂದರೆ ತಕ್ಷಣ ಪೊಲೀಸರಿಗೆ ಮಾಹಿತಿ ನೀಡುವುದು ನಮ್ಮೆಲ್ಲರ ಕರ್ತವ್ಯ.**

## ಛಪಾಕ್ ಎನ್ನುವ ಎಚ್ಚರ

ಮೇಘನಾ ಗುಲ್ಜಾರ್ ನಿರ್ದೇಶನದ, ದೀಪಿಕಾ ಪಡುಕೋಣೆ ನಾಯಕಿಯಾಗಿ ನಟಿಸಿರುವ ‘ಛಪಾಕ್’ ಹಿಂದಿ ಸಿನಿಮಾ ಆ್ಯಸಿಡ್ ದಾಳಿಗೆ ಗುರಿಯಾದ ಲಕ್ಷ್ಮಿ ಅಗರವಾಲ್ ಎನ್ನುವ ಹೆಣ್ಣುಮಗಳೊಬ್ಬಳ ಬದುಕಿನ ಕಥೆಯನ್ನು ಆಧರಿಸಿದ ಸಿನಿಮಾ.

ನೀರಿನೊಳಗೆ ಬಿದ್ದ ವಸ್ತುವಿನಿಂದ ಉಂಟಾಗುವ ಶಬ್ದಕ್ಕೆ ಹಿಂದಿಯಲ್ಲಿ ಛಪಾಕ್ ಎಂದು ಕರೆಯುತ್ತಾರೆ. ಆ ಸದ್ದು ಕಿವಿಗೆ ಹಿತವಾಗಿಯೇನೋ ಇರುತ್ತದೆ. ಆದರೆ ಶಬ್ದದ ಜೊತೆಗೆ ಕಂಪನವೂ ಉಂಟಾಗುತ್ತದೆ. ‘ಛಪಾಕ್’ ಸಿನಿಮಾ ಮಾತನಾಡುವುದು ಕಂಪನದ ಕುರಿತಾಗಿಯೇ. ನೀರಿನಲ್ಲಿ ಉಂಟಾಗುವ ಕಂಪನ ಕೆಲವು ಕ್ಷಣಗಳಿಗೆ ಸೀಮಿತವಾದುದು. ಆದರೆ, ಬದುಕೆಂಬ ಮಾನಸಸರೋವರದಲ್ಲಿ ಆ್ಯಸಿಡ್ ದಾಳಿಯಿಂದಾಗಿ ಉಂಟಾಗುವ ಅಲ್ಲೋಲಕಲ್ಲೋಲ ಜೀವನಪೂರ್ತಿ ಉಳಿಯುವಂತಹದ್ದು. ಅಂಥ ಅಲ್ಲೋಲಕಲ್ಲೋಲಕ್ಕೆ ಗುರಿಯಾದ ತರುಣಿಯ ಬದುಕನ್ನು, ಸಂಘರ್ಷದ ಯಾನವನ್ನು ‘ಛಪಾಕ್’ ಆರ್ದ್ರವಾಗಿ ಚಿತ್ರಿಸಿದೆ. ಆ್ಯಸಿಡ್ ದಾಳಿಗೊಳಗಾಗಿ, ತನಗಾದ ಅನ್ಯಾಯದ ವಿರುದ್ಧ ಕಾನೂನು ಹೋರಾಟ ನಡೆಸುವ, ಏಳು ಬಾರಿ ಶಸ್ತ್ರಚಿಕಿತ್ಸೆಗೊಳಗಾಗಿ ಮುಖದ ಕುರೂಪವನ್ನು ಒಂದಷ್ಟು ಸರಿಪಡಿಸಿಕೊಳ್ಳುವ ದಿಟ್ಟ ತರುಣಿಯ ಕಥೆ ಚಿತ್ರದಲ್ಲಿದೆ.

ಛಪಾಕ್ ಸಿನಿಮಾಕ್ಕೆ ಎರಡು ಆಯಾಮಗಳಿವೆ. ಒಂದು, ದೌರ್ಜನ್ಯಕ್ಕೊಳಗಾದವರು ಬದುಕನ್ನು ದಿಟ್ಟತನದಿಂದ ಎದುರಿಸಬೇಕೆನ್ನುವ ಸಂದೇಶ. ಮತ್ತೊಂದು, ದೌರ್ಜನ್ಯಕ್ಕೊಳಗಾದ ಹೆಣ್ಣುಮಕ್ಕಳ ಸ್ಥಿತಿ ಎಷ್ಟು ದಾರುಣವಾಗಿರುತ್ತದೆ ಎನ್ನುವುದನ್ನು ಸಮಾಜಕ್ಕೆ ತೋರಿಸುವುದು. ಎರಡು ಉದ್ದೇಶಗಳಲ್ಲೂ ಸಿನಿಮಾ ಯಶಸ್ವಿಯಾಗಿದೆ.



ಆ್ಯಸಿಡ್ ದಾಳಿ ಸಂತ್ರಸ್ತೆ ಲಕ್ಷ್ಮಿ ಜೊತೆ ದೀಪಿಕಾ ಒಂದು ಭಾವುಕ ಕ್ಷಣ